ಶ್ರೀ ಅಬ್ದುಲ್ ಖಿದ್ವಾಸ್ ಅನ್ವಾರ್ —ನಮ್ಮ ಜಿಲ್ಲೆಯಲ್ಲಿ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಟ್ಟಿದ್ದರೂ ಅಲ್ಲಿ ದನಗಳ ಆಸ್ಪತ್ರೆಯನ್ನು ಇನ್ನೂ ಮಂಜೂರು ಮಾಡಿಲ್ಲ. ಕಾರಣವೇನು, ಅಲ್ಲಿಗೆ ನೇಗ ಇನ್ನು ಒಂದೆರೆಡು ದನಗಳ ಆಸ್ಪತ್ರೆಯನ್ನು ಮಂಜೂರು ಮಾಡುತ್ತಾರೆಯೇ?

ಶ್ರೀ ಕೆ.ಎಚ್. ಪಾಟೀಲ್.—ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಅಬ್ದುಲ್ ಖಿದ್ವಾಸ್ ಅನ್ವಾರ್.—ನಮ್ಮ ಜಿಲ್ಲೆಯಲ್ಲಿ ಎರಡು ಕಡೆ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಅಂದರೆ—ಹೊಳೆಹೊನ್ನೂರು ಮತ್ತು ಲಕ್ಕವಳ್ಳಿ ಈ ಎರಡು ಊರುಗಳವರು ಕೊಟ್ಟಿದ್ದರೂ ಅಲ್ಲಿ ಏಕೆ ಆಸ್ಪತ್ರೆಗಳನ್ನು ಇನ್ನೂ ಮಂಜೂರು ಮಾಡಿಲ್ಲ?

ಶ್ರೀ ಕೆ.ಎಚ್. ಪಾಟೀಲ್.—ಇದನ್ನು ವಿಚಾರ ಮಾಡುವುದಾಗಿ ಆಗಲೇ ತಿಳಿಸಿದ್ದೇನೆ. ಹಾಗೆ ಒಂದು ವೇಳೆ ಆ ಹಣವನ್ನು ಅವರು ಪಾಪಸ್ ಕೊಡಬೇಕೆಂದು ಕೇಳಿದರೆ ಅದಕ್ಕೂ ಸರ್ಕಾರದವರ ಅಬ್ಜೆಕ್ಷನ್ ಇಲ್ಲ.

ಒಬ್ ಸದಸ್ಯರು.—ಮಲೆನಾಡಿನಲ್ಲಿ ಸಾಮಾನ್ಯವಾಗಿ ದನಗಳ ಆಸ್ಪತ್ರೆಯೇ ಬಹಳ ಕಡಮೆ. ಆದರಿಂದ ಅಲ್ಲಿಗೆ ಒಂದು ವಿಶೇಷ ಗಮನಕೊಟ್ಟು ಇನ್ನೂ ಹೆಚ್ಚಿನ ಆಸ್ಪತ್ರೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಕೆ.ಎಚ್. ಪಾಟೀಲ್.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ. ಇದರಲ್ಲಿ ಸ್ಪೆಷಲ್ ಅನ್ನುವುದೇನೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಲೆನಾಡಿನ ಬಗ್ಗೆ ಸರ್ಕಾರದವರು ಒಂದು ಒಳ್ಳೆಯ ದೃಷ್ಟಿ ಇಟ್ಟುಕೊಂಡು ಇರತಕ್ಕ ನಿಯಮಗಳನ್ನು ಸಡಿಲಮಾಡಿ ಅಲ್ಲಿಗೆ ಹೆಚ್ಚಿನ ಆಸ್ಪತ್ರೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರಿ ಕೆ. ಎಚ್. ಪಾಟೀಲ್.—ಸಲಹೆ ಯೋಗ್ಯವಾಗಿದೆ. ಸರ್ಕಾರದವರು ಯೋಗ್ಯ ಕ್ರಮ ಕೈಗೊಳ್ಳುತ್ತಾರೆಂದು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ALLOTMENT OF LANDS TO TUGNABHADRA SUGAR FACTORY

415 SRI H. B. KADASIDUAPPA (Honnali).—

Will the Minister for Revenue be pleased to state.—

(*a*) whether it is a fact that the Government has given lands to Tungabhadra Sugar Factary at Shimoga for constructing a colony to the Factory labourers;

(*b*) if so, the extent of lands given and whether the labour quarters have been constructed;

(*c*) if not, the action taken in this direction?

SRI N. HUTCHAMASTHY GOWDA.— (Minister for Revenue)

(*a*) Yes

(*b*) 12 acres. 33 twin labour quarters have been constructe in a portion of the laad at Nidige.

(*c*) Does nor arise in view of replies to clauses (*a*) and (*b*)

Madam, answer to question (c) may please be taken as follows:

(c) The land on which no houses have been constructed will be resumed to Government if it is not used for the purpose for which it has been granted after enquiry

ಶ್ರೀ ಎಚ್. ಬಿ ಕಾಡಸಿದ್ದಪ್ಪ.—ಇನ್ನುಳಿದ ಕಾರ್ಮಿಕರಿಗೆ ಮನೆಗಳ ನ್ನು ಒದಗಿಸುವುದಕ್ಕೆ ಸರ್ಕಾರ ದವರು ಏನು ಮಾಡುತ್ತಾರೆ?

† ಶ್ರೀ ಎನ್.—ಹುಚ್ಚಮಾಸ್ತಿಗೌಡ.—ಅಲ್ಲಿ ಅವರು ಲೇಬರ್ಸಿಗೆ ವಸತಿ ಸೌಕರ್ಯಕ್ಕಾಗಿ ೨೨ ಎಕರೆ ಜಮೀನನ್ನು ಕೇಳಿದ್ದರು. ಸರ್ಕಾರ ಒದಗಿಸಿದೆ. ಅಲ್ಲಿ ೩೩ ಜೋಡೀ ಗೃಹಗಳನ್ನು ಅವರು ಕಟ್ಟಿಸಿ ಕೊಟ್ಟಿದ್ದಾರೆ.

ಶ್ರೀ ಎಚ್. ಬಿ. ಕಾಡಸಿದ್ದಪ್ಪ.—ನಾನು ಕೇಳಿದ್ದು ಉಳಿದ ಕಾರ್ಮಿಕರಿಗೇನು ಮಾಡುತ್ತಾರೆ ಎಂದು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಫ್ಯಾಕ್ಟರಿಯವರಿಗೆ ಇನ್ನುಳಿದವರಿಗೂ ಮನೆಗಳನ್ನು ಕಟ್ಟಿಸು ವಂತೆ ತಿಳಿಸಲಾಗುತ್ತದೆ.

ಶ್ರೀ ಎಚ್. ಬಿ ಕಾಡಸಿದ್ದಪ್ಪ.—ಅಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಭೂಮಿಯಲ್ಲಿ ಇನ್ನೂ ಹಾಗೆ ಭೂಮಿ ಉಳಿದಿದ್ದರೆ ಅಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುವರೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಕಾರ್ಮಿಕರಿಗೆ ವಸತಿ ಸೌಕರ್ಯಕಲ್ಪಿಸುವುದಕ್ಕಾಗಿ ಎರಡು ಕಡೆ ಜಾಗ ಕೊಡಲಾಗಿದೆ. ನಿದಿಗಿ ಗ್ರಾಮದ ಸರ್ವೆ ನಂಬರ್ ೧೮೮ರಲ್ಲಿ ೩೦ ಎಕರೆಗಳನ್ನು ಕೊಟ್ಟಿದೆ. ಅನಂತರ ಮಳಲಿಗೊಪ್ಪ ಗ್ರಾಮದ ಸರ್ವೆ ನಂ ೪೮೮ರಲ್ಲಿ ೬ ಎಕರೆ ಭೂಮಿಯನ್ನು ಕೊಟ್ಟಿದೆ. ಅವರಿಗೆ ಆ ಜಾಗ ಬೇಕಿಲ್ಲವೆಂದಾದರೆ ಅದನ್ನು ಸರ್ಕಾರದವರು ವಾಪಸ್ ತೆಗೆದು ಕೊಳ್ಳುತ್ತಾರೆ.

SRI ABDUL KUUDUS ANWER.—Can you not force the management to take land and suggest to the House Board to provide houses?

ಶ್ರೀ ಎನ್.—ಹುಚ್ಚಮಾಸ್ತಿ ಗೌಡ.—ಈ ವಿಚಾರದಲ್ಲಿ ಆ ಕಂಪೆನಿಯವರ ಮೇಲೆ ಬೇರೇನಾದರೂ ನಿರ್ಬಂಧ ಹಾಕುವುದಕ್ಕೆ ಅವಕಾಶವಿದ್ದರೆ ಅದನ್ನೂ ಕೂಡ ಮಾನ್ಯ ಸಂಬಂಧಪಟ್ಟ ಸಚಿವರಿಗೆ ತಿಳಿಸಲಾ ಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಸಬ್‌ಸಿಡೈಜ್ಡ್ ರೇಟಿನಲ್ಲಿ ಮನೆಗಳನ್ನು ಕಟ್ಟಿಸಿ ಕಾರ್ಮಿಕರಿಗೆ ಕೊಡು ವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅದನ್ನು ಸರ್ಕಾರದವರು ಒತ್ತಾಯಮಾಡಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೆ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ವಿಷಯವನ್ನು ಸಂಬಂಧಪಟ್ಟ ಸಚಿವರಿಗೆ ತಿಳಿಸಲಾಗುತ್ತದೆ. ಅವರು ಕ್ರಮಕ್ಕೆಗೊಂಡರೆ ಸರಿ. ಇಲ್ಲವಾದರೆ ಅಲ್ಲಿ ಉಳಿದಿರತಕ್ಕ ಹೆಚ್ಚುವರಿ ಭೂಮಿಯನ್ನು ಸರ್ಕಾರ ದವರು ವಾಪಸ್ ಪಡೆಯುವುದಕ್ಕೆ ಕ್ರಮಕ್ಕೆಗೊಳ್ಳುವಂತೆ ತಿಳಿಸಲಾಗುತ್ತದೆ.

SRI ABDUL KUUDUS ANWAR.—The question of taking back land does not arise. You can kindly consult the concerned minister and see that houses are constructed for poor people.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ವಿಷಯವನ್ನೂ ಕೂಡ ಸಂಬಂಧಪಟ್ಟ ಸಚಿವರ ಗಮನಕ್ಕೆ ತರಲಾಗುವುದು.

APPOINTMENT OF STUDENT WELFARE OFFICERS IN COLLEGES

438. SRI KAGODU THIMMAPPA (Sagar).—

Will the Minister of State for Youth Services be pleased to state.—

(*a*) the number of colleges in the State in which the Student Welfare Officers have been appointed;